Govt. of Karnataka ಅನುಬಂಧ-ಎ [C.R.P. 67

Deposition Sheets
(R.P. No. 57)
Form No. 4
(Criminal)

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ,ಶಿರಾ.**

**ಪ್ರಕರಣ ಸಂಖ್ಯೆಃ ಸಿ.ಸಿಃ 413/2017**

| **ದಿನಾಂಕ 30.10.2023 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.** | | | |
|---|---|---|---|
| **C.W.** | 1 | **P.W.** | 1 |
| **ಹೆಸರು** | ಹೆಚ್.ಎನ್.ನರಸಪ್ಪ | | |
| **ತಂದೆಯ/ಗಂಡನ ಹೆಸರು** | ಲೇ.ನರಸಪ್ಪ | | |
| **ವಯಸ್ಸು** | 73 | | |
| **ಉದ್ಯೋಗ** | ನಿವೃತ್ತ ಶಿರಸ್ತೇದಾರರು (ನ್ಯಾಯಾಂಗ ಇಲಾಖೆ) | | |
| **ವಾಸ** | ಬೆಂಗಳೂರು | | |

**ಮುಖ್ಯವಿಚಾರಣೆಃ ಎ.ಪಿ.ಪಿ. ರವರಿಂದಃ**

1. ಶಿರಾ ತಲ್ಲೂಕಿನ ಮೇಲುಕುಂಟೆ ಗ್ರಾಮದಲ್ಲಿ ಸರ್ವೆ ನಂ. 12 ರಲ್ಲಿ ಹೊಸೂರಪ್ಪ ಎನ್ನುವವರಿಗೆ ಸೇರಿದ 1 ಎಕರೆ 16 ಗುಂಟೆ ಜಮೀನು ಇದ್ದು, 1 ನೇ ಆರೋಪಿಯು ಸದರಿ ಹೊಸೂರಪ್ಪನ ಮಗ ಆಗಿದ್ದು, 2 ನೇ ಆರೋಪಿಯು ಹೊಸೂರಪ್ಪನ ಹೆಂಡತಿಯಾಗಿದ್ದು, ಸದರಿ ಹೊಸೂರಪ್ಪನವರು ಪವತಿಯಾದ ಕಾರಣ ಸದರಿ 1 ಎಕರೆ 16 ಗುಂಟೆ ಜಮೀನಿನ ಪೈಕಿ 8 ಗುಂಟೆ ಜಮೀನನ್ನು ಆರೋಪಿತರು ದಿನಾಂಕ 30.08.1978 ರಂದು ನನಗೆ ಕ್ರಯಕ್ಕೆ ಕೊಟ್ಟಿದ್ದು, ಅದರಂತೆ ಎಂ.ಆರ್ ಮತ್ತು ಪಹಣಿಯನ್ನು ನನ್ನ ಹೆಸರಿಗೆ ಮಾಡಿಸಿಕೊಂಡಿರುತ್ತೇನೆ. ಉಳಿಕೆ 28 ಗುಂಟೆ ಜಮೀನನ್ನು ದಿನಾಂಕ 10.06.1983 ರಲ್ಲಿ ಮಾರಾಟ ಮಾಡಿರುತ್ತಾರೆ. ಅದರಂತೆ ಎಂ.ಆರ್ ಮತ್ತು ಪಹಣಿಯನ್ನು ನನ್ನ ಹೆಸರಿಗೆ ಮಾಡಿಸಿಕೊಂಡಿರುತ್ತೇನೆ.

2. 10 ವರ್ಷಗಳ ನಂತರ 06.08.1982 ರಲ್ಲಿ ನನ್ನ ಜಮೀನನ್ನು ಮೋಸ ಮಾಡಿ ಕಬಳಿಸುವ ಉದ್ದೇಶದಿಂದ 3 ನೇ ಆರೋಪಿಗೆ 1 ಮತ್ತು 2 ನೇ ಆರೋಪಿತರು ಅವರ ಹೆಸರಿಗೆ ಯಾವುದೇ ಜಮೀನು ಇಲ್ಲದೇ ಇದ್ದರೂ ಸಹ ಮಾರಾಟ ಮಾಡಿರುತ್ತಾರೆ. 1 ಮತ್ತು 2 ನೇ ಆರೋಪಿತರು ತಮ್ಮ ಹೆಸರಿನಲ್ಲಿ ದಾಖಲಾತಿ ಇದೆ ಎಂದು ತೋರಿಸಲು ಪಹಣಿ ಮತ್ತು ಎಂ.ಆರ್. ನ್ನು ತಿದ್ದಿರುತ್ತಾರೆ ಹಾಗೂ ಪಹಣಿಯಲ್ಲಿ ನನ್ನ ಹೆಸರನ್ನು ತೆಗೆಸಿರುತ್ತಾರೆ. ಈ ಬಗ್ಗೆ ಯಾವುದೇ ನ್ಯಾಯಾಲಯದ ಆದೇಶ ಮತ್ತು ತಹಶೀಲ್ದಾರರ ಆದೇಶ ಇಲ್ಲದೇ ಇದ್ದರೂ ಸಹ ಪಹಣಿಯಿಂದ ನನ್ನ ಹೆಸರನ್ನು ತೆಗೆಸಿರುತ್ತಾರೆ. ಸೆಪ್ಟೆಂಬರ್-2016 ರಲ್ಲಿ ನನಗೆ ಈ ವಿಚಾರ

ತಿಳಿದುಬಂದಿದ್ದು, ನಾನು ದಿನಾಂಕ 15.10.2016 ರಲ್ಲಿ ನಾನು ಈ ಬಗ್ಗೆ ಪಟ್ಟನಾಯಕನಹಳ್ಳಿ ಪೊಲೀಸ್ ಠಾಣೆಗೆ ಆರ್.ಪಿ.ಎ.ಡಿ. ಮುಖಾಂತರ ದೂರನ್ನು ಕೊಟ್ಟಿರುತ್ತೇನೆ. ನಂತರ ಅವರು ನಮ್ಮ ವ್ಯಾಪ್ತಿಗೆ ಬರುವುದಿಲ್ಲ ಎಂದು ಶಿರಾ ನಗರ ಠಾಣೆಗೆ ಅದನ್ನು ವರ್ಗಾವಣೆ ಮಾಡಿರುತ್ತಾರೆ. ಸಾಕ್ಷಿಯು ಕಡತದಲ್ಲಿ ಇರುವ ದೂರನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.1 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು.

3. ಪೊಲೀಸರು ದಿನಾಂಕ 06.11.2016 ರಂದು ಸರ್ವೆ ನಂ. 12 ರ ಮೇಲುಕುಂಟೆಯ ಜಮೀನಿನಲ್ಲಿ ಮಹಜರನ್ನು 11.00-11.45 ರವರೆಗೂ ಮಾಡಿರುತ್ತಾರೆ. ಸ್ಥಳವನ್ನು ನಾನೇ ತೋರಿಸಿಕೊಟ್ಟಿರುತ್ತೇನೆ. ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.2 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು. ಮಹಜರು ಕಾಲದಲ್ಲಿ ಚಾ.ಸಾ.3 ಮತ್ತು 4 ರವರು ಸಹಿ ಮಾಡಿರುತ್ತಾರೆ.

4. ದಿನಾಂಕ 10.06.1983 ರ ಕ್ರಯ ಪತ್ರದ ದೃಢೀಕೃತ ಪ್ರತಿಯನ್ನು ನಿ .ಪಿ. 3 ಎಂದು ಗುರುತಿಸಲಾಯಿತು. ದಿನಾಂಕ 06.08.1982 ರ ಕ್ರಯ ಪತ್ರದ ದೃಢೀಕೃತ ಪ್ರತಿಯನ್ನು ನಿ.ಪಿ. 4 ಎಂದು ಗುರುತಿಸಲಾಯಿತು. ಖಾತಾ ದಾಖಲಾತಿಯ ದೃಢೀಕೃತ ಪ್ರತಿಯನ್ನು ನಿ.ಪಿ.5 ಎಂದು ಗುರುತಿಸಲಾಯಿತು. ಪಹಣಿ ಪತ್ರಿಕೆಗಳ ದೃಢೀಕೃತಕ ಪ್ರತಿಗಳನ್ನು ನಿ.ಪಿ. 6 ರಿಂದ 10 ಎಂದು ಗುರುತಿಸಲಾಯಿತು. ಸೃಷ್ಟಿತ ದಾಖಲಾತಿಗಳ ಮೇಲೆ ಆರೋಪಿತರು ನಕಲು ಕ್ರಯ ಪತ್ರವನ್ನು ಸೃಷ್ಟಿ ಮಾಡಿರುತ್ತಾರೆ ಮ್ಯುಟೇಷನ್ ದಾಖಲಾತಿಯ ದೃಢೀಕೃತ ಪ್ರತಿಯನ್ನು ನಿ.ಪಿ. 11 ಎಂದು ಗುರುತಿಸಲಾಯಿತು. ಸಾಕ್ಷಿಯು ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. 3 ನೇ ಆರೋಪಿಯು ಗೈರುಹಾಜರಾಗಿದು ಗುರುತಿಸುವಿಕೆಯಲ್ಲಿ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ.

**<u>ಪಾಟೀಸವಾಲುಃ- ಆರೋಪಿ ಪರ ಶ್ರೀ ಡಿ.ಕೆ. ವಕೀಲರಿಂದಃ</u>**

1. ನಾನು ಬಿ.ಎಸ್.ಸ್ಸಿ ಪದವೀಧರ. ನಾನು ನ್ಯಾಯಾಂಕ ಇಲಾಖೆಯಲ್ಲಿ 1979 ರಿಂದ 2008 ರವರೆಗೂ ಸೇವೆ ಸಲ್ಲಿಸಿದ್ದೇನೆ. ಚಾ.ಸಾ.2 ರವರಿಗೂ ನನಗೂ ಎಷ್ಟು ವರ್ಷಗಳ ವಿಶ್ವಾಸ ಎಂದರೆ ಸಾಕ್ಷಿಯು ಹುಟ್ಟಿನಿಂದಲೂ ಪರಿಚಯಸ್ಥರು ಅವರು ನಮ್ಮ ಪಕ್ಕದ ಊರಿನವರು. ಚಾ.ಸಾ. 3 ರವರೂ ಸಹ ನಮ್ಮ ಪಕ್ಕದ ಊರಿನವರಾಗಿದ್ದು, ಅವರು ಚಿಕ್ಕಂದಿನಿಂದಲೂ ಪರಿಚಯಸ್ಥರು. ಚಾ.ಸಾ.4 ರವರು ಸುಮಾರು 10 ವರ್ಷಗಳಿಂದ ಪರಿಚಯ. ನ್ಯಾಯಾಂಗ

ಇಲಾಖೆಯಲ್ಲಿ ಕೆಲಸ ಮಾಡುವ ಸಮಯದಲ್ಲಿ ಯಾವುದೇ ಆಸ್ತಿಯನ್ನು ಖರೀದಿ ಮಾಡಲು ಪೂರ್ವಾನುಮತಿ ಬೇಕು ಎಂದರೆ ಸರಿಯಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ನಾನು ಮೊದಲ ಕ್ರಯ ಪತ್ರವಾದ ಸಮುದಲ್ಲಿ ನಾನು ಇನ್ನೂ ಕೆಲಸಕ್ಕೆ ಸೇರಿರಲಿಲ್ಲ ಎಂದು ನುಡಿಯುತ್ತಾರೆ.

2. ಕ್ರಯ ಪತ್ರದಲ್ಲಿ ನಾನು ನ್ಯಾಯಾಂಗ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದೇನೆ ಎಂದು ಬರೆಸಿಲ್ಲ ಎಂದರೆ ಸರಿ, ಅದರ ಅವಶ್ಯಕತೆ ಇರುವುದಿಲ್ಲ ಎಂದು ನುಡಿಯುತ್ತಾರೆ. ನಾನು ನಿವೃತ್ತಿ ಹೊಂದಿ ಸುಮಾರು 15 ವರ್ಷಗಳಾಗಿವೆ. ನಾನು ನಿ.ಪಿ.4 ರ ಆಸ್ತಿಯನ್ನು ಖರೀದಿ ಮಾಡುವ ಸಮಯದಲ್ಲಿ ನಾನು ನ್ಯಾಯಾಂಗ ಇಲಾಖೆಯಲ್ಲಿ ಇದ್ದೆನು ಎಂದರೆ ಸರಿ. ನಾನು ನನ್ನ ದೂರಿನಲ್ಲಿ ಸರ್ಕಾರಿ ನೌಕರನಾಗಿ ನಿವೃತ್ತಿ ಹೊಂದಿದ್ದೇನೆ ಎಂದು ಎಲ್ಲಿಯೂ ಹೇಳಿಲ್ಲ ಎಂದರೆ ಇರಬಹುದು. ನಾನು ನ್ಯಾಯಾಂಗಲ ಇಲಾಖೆಯಲ್ಲಿ ನೌಕರನಾಗಿದ್ದು, ಕ್ರಯಕ್ಕೆ ಪಡೆಯಬೇಕಾದಲ್ಲಿ ಎಲ್ಲಾ ಆಸ್ತಿಗಳು ಮಾರಾಟಗಾರರ ಹೆಸರಿನಲ್ಲಿ ಇದ್ದ ಸಂದರ್ಭದಲ್ಲಿ ಮಾತ್ರ ಖರೀದಿ ಮಾಡಲು ಸಾಧ್ಯ ಎಂದರೆ ಸರಿ.

3. ಆಸ್ತಿಯನ್ನು 1 ಮತ್ತು 2 ನೇ ಆರೋಪಿತರಿಂದ ಖರೀದಿ ಮಾಡುವ ಸಮಯದಲ್ಲಿ ರೆವೆನ್ಯೂ ದಾಖಲಾತಿಗಳು 1 ಮತ್ತು 2 ನೇ ಆರೋಪಿತರ ಹೆಸರಿನಲ್ಲಿ ಇತ್ತಾ ಅಥವಾ ಇಲ್ಲವಾ ಎಂದರೆ ಸಾಕ್ಷಿಯು ಬಹುಶಃ ಅವರ ಹೆಸರಿನಲ್ಲಿ ಇರಲಿಲ್ಲ ಆದರೆ 1 ನೇ ಆರೋಪಿಯು ತನ್ನ ತಂದೆಯು ಖರೀದಿ ಮಾಡಿದಂತಹ ಸದರಿ ಆಸ್ತಿಯ ಮೂಲ ಕ್ರಯ ಪತ್ರವನ್ನು ನನಗೆ ಹಾಜರುಪಡಿಸಿದ್ದರು ಅದನ್ನು ನೋಡಿ ನಾನು ಆಸ್ತಿಯನ್ನು ಖರೀದಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಿ.ಪಿ.4 ರ ಆಧಾರದ ಮೇಲೆ ನನಗೆ ಖಾತೆ ಪಹಣಿ ವರ್ಗಾವಣೆಯಾಗಿದೆ ಎಂದರೆ ಸರಿ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ನಿ.ಪಿ. 6 ರಿಂದ 9 ರ ಎಲ್ಲಾ ಪಹಣಿ ಪತ್ರಿಕೆಗಳಲ್ಲಿಯೂ ನನ್ನ ಹೆಸರು ಚಾಲ್ತಿಯಲ್ಲಿ ಇದೆ ಎಂದರೆ ಸಾಕ್ಷಿಯು ನಾನು ಖರೀದಿ ಮಾಡಿದ್ದು ಒಟ್ಟಾರೆ ನಾನು ಮತ್ತು ನಮ್ಮ ದೊಡ್ಡಪ್ಪನ ಮಗ ಸಿ.ಎನ್.ದಾಸಪ್ಪ ಬೇರೆ ಬೇರೆಯಾಗಿದ್ದರೂ ಸಹ ನಾನು ಖರೀದಿ ಮಾಡಿದ ಸ್ವತ್ತನ್ನು ನನ್ನ ದೊಡ್ಡಪ್ಪನ ಮಗ ಸಿ.ಎನ್.ದಾಸಪ್ಪ ಜಂಟಿ ಖಾತೆಯ ಜೊತೆ 1 ಎಕರೆ ಕಡಿಮೆ ಮಾಡಿ ನನ್ನ ಹೆಸರನ್ನು ತೋರಿಸಲಾಗಿದೆ ಎಂದು ನುಡಿಯುತ್ತಾರೆ.

4. ನನ್ನ ದೊಡ್ಡಪ್ಪನ ಮಗ ಮತ್ತು ನಾನು ಇಬ್ಬರು ಸೇರಿ 1978 ರಲ್ಲಿ ಸರ್ವೆ ನಂ. 12 ರಲ್ಲಿ 2 ಎಕರೆ ಜಮೀನನ್ನು ಖರೀದಿ ಮಾಡಿದ್ದೇವೆ. ತದನಂತರ ಸರ್ವೆ ನಂ. 12 ರಲ್ಲಿಯೇ

28 ಗುಂಟೆ ಮತ್ತು 28 ಗುಂಟೆಯನ್ನು ಎರಡು ಬಾರಿ ಆರೋಪಿತರಿಂದ ಖರೀದಿ ಮಾಡಿದ್ದೇವೆ. ಹಾಗಿದ್ದಲ್ಲಿ ಒಟ್ಟು 1 ಎಕರೆ 16 ಗುಂಟೆಯ ಜಮೀನನ್ನು ಖರೀದಿ ಮಾಡಿದ್ದೇವೆ ಎಂದರೆ ಸರಿ. ಸದರಿ 1 ಎಕರೆ 16 ಗುಂಟೆ ಹಾಗೂ ನಾನು ಮತ್ತು ನನ್ನ ದೊಡ್ಡಪ್ಪನ ಮಗ ಸೇರಿ ಖರೀದಿ ಮಾಡಿದ 2 ಎಕರೆ ಸೇರಿ ಒಟ್ಟು 3 ಎಕರೆ 16 ಗುಂಟೆ ನಮ್ಮ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿಯು ಸರಿಯಲ್ಲ ಎಂದು ನುಡಿಯುತ್ತಾರೆ. ಮುಂದುವರೆದು ಸರ್ವೆ ನಂ. 12 ರಲ್ಲಿ ಬಿ.ಕೆ.ಕಾಮಣ್ಣ ನವರಿಂದ 1 ಎಕರೆ 16 ಗುಂಟೆಯನ್ನು ಖರೀದಿ ಮಾಡಿದ್ದೇನೆ ಎಂದು ನುಡಿಯುತ್ತಾರೆ.

5. ನಾನು ಬಿ.ಕೆ.ಕಾಮಣ್ಣನವರಿಂದ ಖರೀದಿ ಮಾಡಿದ 1 ಎಕರೆ 16 ಗುಂಟೆ ಮತ್ತು ನನ್ನ ದೊಡ್ಡಪ್ಪನ ಮಗನ ಜೊತೆ ಸೇರಿ ಖರೀದಿ ಮಾಡಿದ 2 ಎಕರೆ ಬಗ್ಗೆ ದೂರನಲ್ಲಿ ಹೇಳಿ ಬರೆಸಿಲ್ಲ ಎಂದರೆ ಅದರ ಅವಶ್ಯಕತೆ ಇಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನಿ,ಪಿ.10 ರಂತೆ ಈಗಾಲೂ ಸಹ ನಾನು ಮತ್ತು ನನ್ನ ದೊಡ್ಡಪ್ಪನ ಮಗನ ಹೆಸರಿನಲ್ಲಿ ಈಗಲೂ ಸಹ 3 ಎಕರೆ 24 ಗುಂಟೆಯಂತೆ ಜಮೀನು ತೋರಿಸುತ್ತಿದೆ ಎಂದರೆ ಸಾಕ್ಷಿಯು ಆ ಪೈಕಿ ನನಗೆ 1 ಎಕರೆ ಕಡಿಮೆ ತೋರಿಸುತ್ತಿದೆ ಎಂದು ನುಡಿಯುತ್ತಾರೆ.

6. ಎಂ.ಆರ್.20/1978-79 ಎಂದು ರೆವೆನ್ನೂ ಇಲಾಖೆಯವರು ಆದೇಶವನ್ನು ವಿಸ್ತೀರ್ಣ ಬದಲಾವಣೆ ಎಂದು ಮಾಡಿದ್ದಾರೆ ಎಂದರೆ ಸಾಕ್ಷಿಯು 3 ನೇ ಆರೋಪಿಯು ಆಸ್ತಿ ಖರೀದಿ ಮಾಡಿದ ಸಮಯದಲ್ಲಿ ತಲ್ಲೂಕು ಕಛೇರಿಯವರ ಜೊತೆ ಆರೋಪಿತರೂ ಸೇರಿ ಶಾಮೀಲಾಗಿ ತಿದ್ದಿ ಮಾಡಲಾದಂತಹ ಆದೇಶವಾಗಿದೆ ಎಂದು ನುಡಿಯುತ್ತಾರೆ. 3 ನೇ ಆರೋಪಿಯು 06.05.1992 ರಲ್ಲಿ ಆಸ್ತಿ ಖರೀದಿ ಮಾಡಿಕೊಂಡಿದ್ದಾರೆ. 3 ನೇ ಆರೋಪಿಯು ಆಸ್ತಿ ಖರೀದಿ ಮಾಡುವ ಮುಂಚೆ 1979 ರಲ್ಲಿಯೇ ಪಹಣಿ ತಿದ್ದುಪಡಿಯಾಗಿದೆ ಎಂದರೆ ಸರಿಯಲ್ಲ. ನಾನು ಎಂ.ಆರ್. ಆದೇಶವನ್ನು ಯಾವುದೇ ಪ್ರಾಧಿಕಾರದ ಮುಂದೆ ಪ್ರಶ್ನೆ ಮಾಡಿಲ್ಲ ಎಂದರೆ ಸಾಕ್ಷಿಯು ಪ್ರಶ್ನೆ ಮಾಡಿದ್ದು, ಕೇಸು ಇನ್ನು ಪ್ರಾಧಿಕಾರದ ಮುಂದೆ ನಡೆಯುತ್ತಿದೆ ಎಂದು ನುಡಿಯುತ್ತಾರೆ.

7. 1 ಮತ್ತು 2 ನೇ ಆರೋಪಿತರು ಯಾವುದೇ ಕಂದಾಯ ಇಲಾಖೆಯ ನೌಕರರು ಅಲ್ಲ ಎಂದರೆ ಸರಿ. ಆರೋಪಿತರು ಕಂದಾಯ ಇಲಾಖೆಗೆ ಸೇರಿಲ್ಲದೇ ಇರುವ ಕಾರಣ ಅವರಿಗೆ ತಿದ್ದುಪಡಿ ಮಾಡುವ ಅಧಿಕಾರ ಇಲ್ಲ ಎಂದರೆ ಸಾಕ್ಷಿಯು ಆರೋಪಿತರು ಶಾಮೀಲಾಗಿ ತಿದ್ದುಪಡಿ ಮಾಡಿಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ನಿಖರವಾಗಿ ಯಾವ

ದಿನಾಂಕದಂದು ತಿದ್ದುಪಡಿಯಾಗಿದೆ ಎಂದು ನನಗೆ ಗೊತ್ತಿಲ್ಲ, ಕಂದಾಯ ಇಲಾಖೆಯವರ ಬಳಿ ಎಲ್ಲಾ ದಾಖಲಾತಿಗಳು ಇರುತ್ತವೆ ಎಂದು ಸಾಕ್ಷಿ ನುಡಿಯುತ್ತಾರೆ. ಸಂಬಂಧಪಟ್ಟ ರೆವೆನ್ಯೂ ಅಧಿಕಾರಿಗಳ ಮೇಲೆ ಯಾವುದೇ ಕಾನೂನು ಕ್ರಮವನ್ನು ನಾನು ಕೈಗೊಳ್ಳಲಿಲ್ಲ ಎಂದರೆ ಸಾಕ್ಷಿಯು ನಾನು ತಾಲ್ಲೂಕು ಕಛೇರಿಗೆ ಈ ಬಗ್ಗೆ ಅರ್ಜಿಯನ್ನು ಸಲ್ಲಿಸಿದ್ದು, ಕಂದಾಯ ಅಧಿಕಾರಿ ರಾಜಣ್ಣನವರು ಮೃತಪಟ್ಟಿದ್ದಾರೆ ಮತ್ತು ವಿ.ಎ ಹಾಗೂ ಆರ್.ಐ ರವರು ನಿವೃತ್ತಿ ಹೊಂದಿದ್ದಾರೆ ಎಂದು ಈ ಬಗ್ಗೆ ಹಿಂಬರಹವನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ.

8. ನಾನು ಅರ್ಜಿಯನ್ನು ಕೊಟ್ಟಿಲ್ಲ ಆರ್.ಟಿ.ಐ. ಅಡಿಯಲ್ಲಿ ನಾನು ಮಾಹಿತಿಯನ್ನು ಪಡೆದುಕೊಂಡಿರುತ್ತೇನೆ. ಸದರಿ ಆರ್.ಟಿ.ಐ. ರವರಿಂದ ಪಡೆದ ಮಾಹಿತಿಯನ್ನು ತನಿಖಾಧಿಕಾರಿಯ ಕೈಗೆ ಕೊಟ್ಟಿಲ್ಲ. ಇದೇ ವಿಚಾರವಾಗಿ ಶಿರಾ ಅಧಿಕ ನ್ಯಾಯಾಲಯದಲ್ಲಿ ಒ.ಎಸ್.20/2018 ರಂತೆ ಕೇಸು ನಡೆಯುತ್ತಿದೆ ಎಂದರೆ ಸರಿ. ಅದರಲ್ಲಿ ಇದೇ ಸರ್ವೆ ನಂಬರ್ ವಿಚಾರವಾಗಿ ನಾನು ನಮ್ಮ ವಕೀಲರ ಮುಖಾಂತರ ನಡೆಸುತ್ತಿದ್ದೇನೆ ಎಂದರೆ ಸರಿ. ಸದರಿ ದಾವೆಯನ್ನು 3 ನೇ ಆರೋಪಿಯು ನನ್ನ ವಿರುದ್ಧ ಸಲ್ಲಿಸಿದ್ದಾರೆ.

9. ದಿನಾಂಕ 06.05.1992 ರ ಕ್ರಯ ಪತ್ರಕ್ಕೆ ಯಾರು ಸಾಕ್ಷಿಯಾಗಿ ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ . ಅದು ಸಬ್ ರಿಜಿಸ್ಟ್ರಾರ್ ಶಿರಾ ಕಛೇರಿಯಲ್ಲಿ ನೊಂದಣಿಯಾಗಿದೆ. ಪತ್ರಬರಹಗಾರರು ಯಾರು ಎಂದು ನನಗೆ ಗೊತ್ತಿಲ್ಲ . ಕ್ರಯ ಪತ್ರ ಸೃಷ್ಟಿ ಮಾಡಲು ಸಾಕ್ಷಿದಾರರು ಮತ್ತು ಬರಹಗಾರರು ಸಾಮಾನ್ಯವಾಗಿ ಶಾಮೀಲಾಗಿರುತ್ತಾರೆ ಎಂದರೆ ಸಾರಿಯಲ್ಲ. ಸಾಕ್ಷಿ ಮುಂದುವರೆದು 3 ನೇ ಆರೋಪಿ ಲಕ್ಷ್ಮಮ್ಮ ಸುಳ್ಳು ಕ್ರಯ ಪತ್ರ ಸೃಷ್ಟಿ ಮಾಡಿಕೊಂಡಿದ್ದು, ವಿ.ಎ. ರವರೂ ಸಹ ಅವರ ಊರಿನವರೇ ಆಗಿದ್ದು, ಸದರಿ ಕ್ರಯ ಪತ್ರ ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ವಿ.ಎ. ರವರ ಹೆಸರು ಬಹಳ ದಿನವಾದ ಕಾರಣ ನನಗೆ ನೆನಪಿಲ್ಲ. ವಿ.ಎ. ರವರ ವಿರುದ್ಧ ಕ್ರಮ ಜರುಗಿಸಿದ್ದೀರಾ ಎಂದರೆ ಸಾಕ್ಷಿಯು ಅವರು ಮೃತಪಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಪಟ್ಟನಾಯಕನಹಳ್ಳಿ ಪೊಲೀಸ್ ಠಾಣೆಗೆ ದಿನಾಂಕ 17.10.2016 ರಂದು ಪೋಸ್ಟ್ ಮುಖಾಂತರ ದೂರು ಸಲ್ಲಿಸಿರುತ್ತೇನೆ. ಆ ದಿನ ಖುದ್ದು ಠಾಣೆಗೆ ಹಾಜರಾಗಿ ದೂರು ಕೊಡಲು ತೊಂದರೆ ಇರಲಿಲ್ಲ, ಸಾಕ್ಷಿ ಮುಂದುವರೆದು ದೂರನ್ನು ಅಂಚೆ ಮೂಲಕ ಅಥವಾ ಆನ್ಲೈನ್ ಮುಖಾಂತರ ಕೊಡಬಹುದು. ಸದರಿ ದೂರನ್ನು ಸ್ವೀಕೃತಿ ಮಾಡಿರುವ ಬಗ್ಗೆ ರಸೀದಿಯನ್ನು ಕೊಟ್ಟಿದ್ದಾರೆ.

10. ಪಟ್ಟನಾಯಕನಹಳ್ಳಿ ಪೊಲೀಸರು ನನ್ನನ್ನು ಠಾಣೆಗೆ ಕರೆಸಿಲ್ಲ, ಅವರು ಕೇಸನ್ನು ಶಿರಾ ಠಾಣೆಗೆ ವರ್ಗಾವಣೆ ಮಾಡಿದ್ದು, ಶಿರಾ ಪೊಲೀಸರು ನನ್ನನ್ನು ಕರೆಸಿರುತ್ತಾರೆ. ದಿನಾಂಕ 06.11.2016 ರಂದು ಪೊಲೀಸರು ಸ್ಥಳಕ್ಕೆ ಬಂದಿದ್ದರು. ಕೃತ್ಯ ನಡೆದ ಸ್ಥಳದ ಆಧಾರದ ಮೇಲೆ ಪಟ್ಟನಾಯಕನಹಳ್ಳಿಯಿಂದ ಶಿರಾ ಠಾಣೆಗೆ ವರ್ಗಾವಣೆಯಾಗಿದೆ ಎಂದರೆ ಸರಿ. ನನಗೆ ಮೋಸವಾಗಿದೆ ಎಂದು ದೂರು ಕೊಟ್ಟಿದ್ದೇನೆ, ಇಂತಹ ಸ್ಥಳದಲ್ಲಿ ಎಂದು ದೂರು ಕೊಟ್ಟಿಲ್ಲ. ಇಬ್ಬರು ಪೊಲೀಸರು ಸ್ಥಳಕ್ಕೆ ಬಂದಿದ್ದರು, ಅವರ ಹೆಸರು ಹೇಳಲು ಸಾಧ್ಯವಿಲ್ಲ. ನಮ್ಮ ಪಕ್ಕದ ಜಮೀನಿನವರಾದ ಚಾ.ಸಾ.3,4 ರವರು ಸ್ಥಳಕ್ಕೆ ಪಂಚರಾಗಿ ಬಂದಿದ್ದರು, ಪೊಲೀಸರಾಗಲೀ, ನಾವಾಗಲೀ ಕರೆದಿರುವುದಿಲ್ಲ.

11. ಮಹಜರನ್ನು ಸ್ಥಳದಲ್ಲಿ ಲ್ಯಾಪ್ ಟಾಪ್ ನಲ್ಲಿ ಟೈಪ್ ಮಾಡಿ ನಂತರ ಠಾಣೆಯಲ್ಲಿ ಪ್ರಿಂಟ್ ತೆಗೆದು ನನ್ನ ಸಹಿ ಮಾಡಿಸಿಕೊಂಡಿರುತ್ತಾರೆ. ಮಹಜರನ್ನು ಸರ್ವೆ ನಂ. 12 ರ ಜಮೀನಿನಲ್ಲಿ ಬರೆದಿರುತ್ತಾರೆ. ಆ ದಿನ ಪೊಲೀಸರು ಸ್ಥಳಕ್ಕೆ ಬಂದಿದ್ದೂ ಇಲ್ಲ ಯಾವುದೇ ಮಹರಜನ್ನು ಮಾಡಿಲ್ಲ ಮತ್ತು ಯಾವುದೇ ಪಂಚರ ಸಮಕ್ಷಮ ಯಾವುದೇ ಸಹಿಯನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿತರು 1 ಮತ್ತು 2 ರವರು ಯಾವುದೇ ರೆವೆನ್ಯೂ ದಾಖಲಾತಿಗಳು ಮತ್ತು ಯಾವುದೇ ಪಹಣಿಯನ್ನು ಸೃಷ್ಟಿ ಮಾಡಿಲ್ಲ ಎಂದರೆ ಸರಿಯಲ್ಲ. 1 ಮತ್ತು 2 ನೇ ಆರೋಪಿತರಿಂದ ಕೇವಲ ಒಂದು ಜಾಗವನ್ನು ಮಾತ್ರ ಖರೀದಿ ಮಾಡಿದ್ದೇವೆ ಎಂದರೆ ಸರಿಯಲ್ಲ. ದಾಖಲಾತಿಗಳನ್ನು ಹಾಜರುಪಡಿಸಿ ಎಂದು ಪೊಲೀಸರು ನನಗೆ ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ ನಾನು ದೂರಿನ ಜೊತೆಯೇ ಎಲ್ಲಾ ದಾಖಲಾತಿಗಳನ್ನು ಕೊಟ್ಟಿದ್ದೇನೆ. ನನಗೂ ಮತ್ತು ಆರೋಪಿತರ ನಡುವೆ ಸರ್ವೆ ನಂ. 12 ಕ್ಕೆ ಸಂಬಂಧಿಸಿದಂತೆ ಪ್ರಕರಣಗಳು ಜಾಸ್ತಿ ಇರುವ ಕಾರಣ ಅವರ ವಿರುದ್ಧ ಸುಳ್ಳು ದೂರು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಕ್ರಿಮಿನಲ್ ಕೇಸು ದಾಖಲಿಸಿದ ನಂತರ ಅವರು ಎಚ್ಚೆತ್ತುಕೊಂಡು ಡಿಕ್ಲರೇಷನ್ ದಾವೆಯನ್ನು ತಂದಿದ್ದಾರೆ ಎಂದು ನುಡಿಯುತ್ತಾರೆ.

12. ರೆವೆನ್ಯೂ ಅಧಿಕಾರಿಗಳಿಂದ ಆಗಿರುವ ತಪ್ಪನ್ನು ಆರೋಪಿತರ ಮೇಲೆ ಹೊರಿಸುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3 ನೇ ಆರೋಪಿಯ ಪರ ವಕೀಲರು ಮೇಲಿನ ಪಾಟೀಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

**ಮುಂದುವರೆದ ಪಾಟೀಸವಾಲುಃ- ಆರೋಪಿ ಪರ ಶ್ರೀ ಡಿ.ಕೆ. ವಕೀಲರಿಂದಃ**

1. ಹೊಸೂರಪ್ಪ ಬಿನ್ ಸಂಚಾರ ರಂಗಪ್ಪ ಎಂದು ನಿ.ಪಿ. 8 ರಲ್ಲಿ ಇದೆ ಎಂದರೆ ಸರಿ. 3 ನೇ ಆರೋಪಿ ಲಕ್ಷ್ಮಮ್ಮ 1 ಮತ್ತು 2 ನೇ ಆರೋಪಿತರಿಂದ ಸರ್ವೆ ನಂ. 12 ರಲ್ಲಿ 1 ಎಕರೆ 16 ಗುಂಟೆ ಪೈಕಿ 28 ಗುಂಟೆಯನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿ, ಆದರೆ ಅದು ಸೃಷ್ಟಿ ಮಾಡಿಸಿಕೊಂಡ ದಾಖಲಾತಿ ಎಂದು ನುಡಿಯುತ್ತಾರೆ. ನಿ.ಪಿ. 6 ರ ದಾಖಲಾತಿಯಲ್ಲಿ ಹೆಚ್.ಎನ್.ನರಸಪ್ಪನವರ ಹೆಸರಿನಲ್ಲಿ 2 ಎಕರೆ ಮತ್ತು 1.16 ಎಕರೆ ಹಾಗೂ 28 ಗುಂಟೆ ಮತ್ತು 28 ಗುಂಟೆ ಎಂದು ಸರಿಯಾಗಿ ಬರೆಯಲಾಗಿದೆ, ಅವರ ಹೆಸರಿಗೆ ಜಮೀನು ಇಲ್ಲದಿದ್ದರೂ ಸೃಷ್ಟಿ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ.
2. ನಿ.ಪಿ. 4 ದಾಖಲಾತಿಯ ಮುಖಾಂತರವೇ ಮೂರನೇ ಆರೋಪಿ ಸದರಿ ಜಮೀನನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿ. ಅದು ಸೃಷ್ಟಿ ಮಾಡಿದ ದಾಖಲಾತಿಯೆಂದು ಸಾಕ್ಷಿ ನುಡಿಯುತ್ತಾರೆ. ಸದರಿ ಕ್ರಯ ಪತ್ರದ ಆಧಾರದ ಮೇಲೆ ಖಾತೆ ಪಹಣಿಯನ್ನು ಕಂದಾಯಾಧಿಕಾರಿಗಳು 3 ನೇ ಆರೋಪಿಗೆ ಮಾಡಿದ್ದಾರೆ ಎಂದರೆ ಸರಿ, ಸಾಕ್ಷಿಯು ಮುಂದುವರೆದು ಅವರಿಗೆ ಖಾತೆ ಮಾಡುವ ಸಲುವಾಗಿ ನನ್ನ ಜಮೀನಿನಲ್ಲಿ ನನ್ನ ಹೆಸರನ್ನು ತೆಗೆದು ಒಟ್ಟುಗೂಡಿಸಿ 3 ನೇ ಆರೋಪಿಯ ಹೆಸರಿಗೆ ಖಾತೆ ಮಾಡಿದ್ದಾರೆ ಎಂದು ನುಡಿಯುತ್ತಾರೆ.
3. ಯಾವುದೇ ಕ್ರಯ ಪತ್ರ ನೊಂದಣಿಯಾಗುವ ಸಮಯದಲ್ಲಿ ಜೆ -ಸ್ಲಿಪ್ ಬರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಆ ಸಮಯದಲ್ಲಿ ಜೆ-ಸ್ಲಿಪ್ ಇರಲಿಲ್ಲ. ಜೆ-ಸ್ಲಿಪ್ ಬಂದ ನಂತರ ಅದನ್ನು ಪ್ರಚಾರಪಡಿಸಬೇಕು ಎಂದರೆ ಸಾಕ್ಷಿಯು ಸರಿ, ಆದರೆ ಅದನ್ನು ಈ ಕೇಸಿನಲ್ಲಿ ಮಾಡಿಲ್ಲ. ನನ್ನ ತಂದೆಗೆ ನಾವು 4 ಜನ ಮಕ್ಕಳು. ಇಬ್ಬರು ಊರಿನಲ್ಲಿ ಇದ್ದಾರೆ ನಾನು ಮತ್ತು ನನ್ನ ತಮ್ಮ ಬೆಂಗಳೂರಿನಲ್ಲಿ ಇದ್ದೇವೆ. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಯಾವುದಾದರೂ ಜಮೀನು ತೆಗೆದುಕೊಳ್ಳುವ ಮುನ್ನ ಊರ ಜನರಿಗೆ ಗೊತ್ತಾಗುತ್ತದೆ ಎಂದರೆ ಸರಿ, ಸಾಕ್ಷಿ ಮುಂದುವರೆದು ನನಗೂ ಸಹ ಗೊತ್ತಾದ ಮೇಲೆಯೇ 1 ಎಕರೆ 16 ಗುಂಟೆಯನ್ನು ಆರೋಪಿತರಿಂದ ಖರೀದಿ ಮಾಡಿದ್ದು ಎಂದು ನುಡಿಯುತ್ತಾರೆ.

4. 3 ನೇ ಆರೋಪಿಯ ಗಂಡ ಪೊಲೀಸ್ ಆಗಿದ್ದರು ಎಂದರೆ ಸರಿ, ಅವರು ಬಂದ ನಂತರವೇ ಈ ರೀತಿ ಮೋಸ ಮಾಡಿದ್ದಾರೆ ಎಂದು ನುಡಿಯುತ್ತಾರೆ. 3 ನೇ ಆರೋಪಿಯ ಗಂಡ ಸುಮಾರು 28 ವರ್ಷಗಳ ಕಾಲ ಬೆಂಗಳೂರಿನಲ್ಲಿ ಕೆಲಸ ಮಾಡಿದ್ದಾರೆ ಎಂದರೆ ಇರಬಹುದು. ಅವರ ಕುಟುಂಬ ಬೆಂಗಳೂರಿನಲ್ಲಿ ಇದ್ದಾರೆ ಎಂದರೆ ಇರಬಹುದು. 3 ನೇ ಆರೋಪಿ ಗೃಹಿಣಿ ಎಂದರೆ ಇರಬಹುದು. 3 ನೇ ಆರೋಪಿಗೆ ಹೆಚ್ಚು ತಿಳುವಳಿಕೆ ಇಲ್ಲ ಎಂದರೆ ಅವರು ವಿದ್ಯಾವಂತರು ಅಲ್ಲ ಆದರೆ ತಿಳುವಳಿಕೆ ಇದೆ ಎಂದು ನುಡಿಯುತ್ತಾರೆ. ಕಾನೂನಿನ ಬಗ್ಗೆ ಅವರಿಗೆ ತಿಳುವಳಿಕೆ ಇಲ್ಲ ಎಂದರೆ ಸರಿಯಲ್ಲ. ಇದೆ ಎಂದು ಸಾಕ್ಷಿ ನುಡಿಯುತ್ತಾರೆ. 3 ನೇ ಆರೋಪಿ ನನಗೆ ಯಾವುದೇ ಮೋಸ ಮಾಡಿಲ್ಲ, ಅನಾವಶ್ಯಕವಾಗಿ ಅವರನ್ನು ಕೇಸಿಗೆ ಸೇರಿಸಿದ್ದೇನೆ ಎಂದರೆ ಸರಿಯಲ್ಲ. ಅವರು ಅವಿದ್ಯಾವಂತರಾದ ಕಾರಣ ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದೂರು ನೀಡಿ ಸುಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5. ನಮ್ಮ ಊರಿನಲ್ಲಿ ಸರ್ವೆ ನಂ.12 ನ್ನು ಹೊರತುಪಡಿಸಿ ನಮಗೆ ಸೇರಿದಂತೆ 4 ಸ್ವತ್ತುಗಳು ಇವೆ. ನನ್ನ ಕುಟುಂಬಕ್ಕೆ ಸೇರಿದ ಸ್ವತ್ತನ್ನು ನಾನು ವ್ಯಸಾಯ ಮಾಡಿಕೊಂಡು ಹೋಗುತ್ತಿದ್ದೇನೆ ಎಂದರೆ ಸಾಕ್ಷಿಯು ನಮ್ಮ ಅಣ್ಣ ತಮ್ಮಂದಿರು ವ್ಯವಸಾಯ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ನಮ್ಮ ಊರಿನ ಆಸ್ತಿಗಳನ್ನು ನಾನೇ ನೋಡಿಕೊಂಡು ಹೋಗುತ್ತಿದ್ದೇನೆ ಎಂದರೆ ಸಾಕ್ಷಿಯು ನನ್ನ ಅಣ್ಣ ತಮ್ಮಂದಿರು ನೋಡಿಕೊಂಡು ಹೋಗುತ್ತಿದ್ದಾರೆ ಎಂದು ನುಡಿಯುತ್ತಾರೆ. 3 ನೇ ಆರೋಪಿತರೇ ಜಮೀನು ಖರೀದಿ ಮಾಡಿದ ನಂತರ ವ್ಯವಸಾಯ ಮಾಡಿಕೊಂಡು ಹೋಗುತ್ತಿದ್ದಾರೆ ಎಂದರೆ ಸರಿಯಲ್ಲ. ಆ ವಿಷಯ ನನ್ನ ಅಣ್ಣ ತಮ್ಮಂದಿರಿಗೆ ಗೊತ್ತು ಎಂದರೆ ಸರಿಯಲ್ಲ. ಸದರಿ ವಿಷಯ ತಿಳಿದಿದ್ದರೂ ಸಹ 3 ನೇ ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು) **ಓದಿ ಹೇಳಿ ಕೇಳಿ ಸರಿ ಇದೆ,**

**ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಶಿರಾ.**